## ನಿಸ್ಪೃಹದನಿ

# ಬೆಂಗಳೂರಿನ ಬ್ರ್ಯಾಂಡ್ ಮೌಲ್ಯ ವೃದ್ಧಿಗೆ ಬೇಕು ದೂರದೃಷ್ಟಿಯ ಯೋಜನೆಗಳು

**ದಕ್ಷಿಣ ಭಾರತದ ಮೆಟ್ರೊ ನಗರಗಳಲ್ಲಿ ಅತಿಹೆಚ್ಚು ಅಪರಾಧ ಪ್ರಕರಣಗಳು ದಾಖಲಾಗಿರುವ ನಗರಗಳಲ್ಲಿ ಮೊದಲ ಸ್ಥಾನದಲ್ಲಿರುವುದು ಬೆಂಗಳೂರಿನ ವರ್ಚಸ್ಸನ್ನು ಮಸುಕಾಗಿಸುವಂತಿದೆ. ದೂರದೃಷ್ಟಿಯಿಂದ ಕೂಡಿದ ಯೋಜನಾಬದ್ಧ ಕೆಲಸಗಳಿಂದಷ್ಟೇ ನಗರದ ವರ್ಚಸ್ಸು ಹೆಚ್ಚಬಲ್ಲದು.**

ಭಾರತದ ‘ಸಿಲಿಕಾನ್ ಸಿಟಿ’ ಎಂದು ಹೆಸರಾಗಿರುವ ಬೆಂಗಳೂರು ತನ್ನದೇ ಆದ ‘ಬ್ರ್ಯಾಂಡ್ ಮೌಲ್ಯ’ವನ್ನು ಹೊಂದಿದೆ. ದೇಶ–ವಿದೇಶಗಳ ಮಾಹಿತಿ ತಂತ್ರಜ್ಞರನ್ನು, ಹೂಡಿಕೆದಾರರನ್ನು ಸೂಜಿಗಲ್ಲಿನಂತೆ ಸೆಳೆಯುವ ಈ ನಗರ, ರಾಜ್ಯದ ಆರ್ಥಿಕ ಶಕ್ತಿಕೇಂದ್ರವೂ ಹೌದು. ರಾಜ್ಯದ ಸರಿಸುಮಾರು ಶೇ.45ರಷ್ಟು ವರಮಾನದ ಮೂಲ ಬೆಂಗಳೂರು. ಆದರೆ, ನಗರದ ವರ್ಚಸ್ಸನ್ನು ಕಾಯ್ದುಕೊಳ್ಳಲು ವಹಿಸಬೇಕಾದಷ್ಟು ಮುತುವರ್ಜಿಯನ್ನು, ಆಸ್ಥೆಯನ್ನು ನಮ್ಮ ಅಧಿಕಾರಸ್ಥರು ವಹಿಸಿಲ್ಲ ಎಂಬುದು ನಗರದ ನಿವಾಸಿಗಳಿಗೆ ಮಾತ್ರವಲ್ಲ, ಕೆಲಸದ ನಿಮಿತ್ತ ನಗರಕ್ಕೆ ಆಗೊಮ್ಮೆ ಈಗೊಮ್ಮೆ ಬಂದು ಹೋಗುವವರ ಅನುಭವಕ್ಕೂ ಬಂದಿರುತ್ತದೆ.

ಎಸ್.ಎಂ. ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಸಿಂಗಪುರ ಮಾದರಿಯಲ್ಲಿ ಬೆಂಗಳೂರನ್ನು ಅಭಿವೃದ್ಧಿಪಡಿಸುವುದಾಗಿ ಹೇಳಿದ್ದರು. ಆನಂತರ ಆಡಳಿತದ ಚುಕ್ಕಾಣಿ ಹಿಡಿದವರು ಕೂಡ ಬೆಂಗಳೂರಿನ ವರ್ಚಸ್ಸು ವೃದ್ಧಿಸುವ ಮಾತುಗಳನ್ನು ಆಡಿದ್ದಾರೆ. ಆದರೆ ಆಳುವವರ ಮಾತಿಗೂ ವಾಸ್ತವಸ್ಥಿತಿಗೂ ಅಜಗಜಾಂತರ ಇದೆ ಎಂಬುದು ಹೆಜ್ಜೆ ಹೆಜ್ಜೆಗೂ ಕಣ್ಣಿಗೆ ರಾಚುತ್ತದೆ. ಕಸ ವಿಲೇವಾರಿಯಂಥ ಕನಿಷ್ಠ ಕೆಲಸವನ್ನೂ ಸಮರ್ಪಕವಾಗಿ ನಿಭಾಯಿಸಲು ನಮ್ಮ ಆಡಳಿತ ವ್ಯವಸ್ಥೆಗೆ ಈವರೆಗೂ ಸಾಧ್ಯವಾಗಿಲ್ಲ ಎಂಬುದು ಕಹಿಮಾತಾದರೂ ಒಪ್ಪಲೇಬೇಕಾದ ಕಟುಸತ್ಯ.

ಬೆಂಗಳೂರು ನಗರದ ಅಭಿವೃದ್ಧಿಯ ಸಲುವಾಗಿ ರಾಜ್ಯ ಬಜೆಟ್‌ನಲ್ಲಿ ಸಾವಿರಾರು ಕೋಟಿ ರೂಪಾಯಿ ಅನುದಾನ ತೆಗೆದಿರಿಸಲಾಗುತ್ತದೆ. ಹಲವಾರು ಅಂಶಗಳನ್ನು ಪರಿಗಣಿಸಿ, ತೂಗಿ, ಅಳೆದು, ಕಳೆದು ಅದು ಬಿಡುಗಡೆಯೂ ಆಗುತ್ತದೆ. ರಾಶಿಗಟ್ಟಲೆ ಬಿಲ್ಲುಗಳು, ರಶೀದಿಗಳು, ಕಡತಗಳು ಸೃಷ್ಟಿಯಾಗುತ್ತವೆ. ದಾಖಲೆಗಳಲ್ಲಿ ಎಲ್ಲವೂ ಸಾಚಾ. ಹಾಗಿದ್ದರೂ ಬೆಂಗಳೂರು ಮಾತ್ರ ಅವ್ಯವಸ್ಥೆಯ ಆಗರವಾಗಿಯೇ ಇದೆ. ಮೂಲ ಸೌಕರ್ಯ ಕಲ್ಪಿಸುವಲ್ಲಿ ಮತ್ತು ಅವುಗಳನ್ನು ಸುಸ್ಥಿತಿಯಲ್ಲಿ ಇರಿಸುವಲ್ಲಿ ಆಗಿರುವ ಲೋಪವೇ ಇದಕ್ಕೆ ಪ್ರಧಾನ ಕಾರಣ.

‘ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ’ದ (ಎನ್‌ಸಿಆರ್‌ಬಿ) ವರದಿ ಈ ಅಂಶವನ್ನು ಎತ್ತಿತೋರಿಸಿದೆ. ನಾಗರಿಕ ಸೇವಾ ಪ್ರಾಧಿಕಾರಗಳ ನಿರ್ಲಕ್ಷ್ಯದಿಂದಾಗಿ ದೇಶದ ನಗರಗಳ ಪೈಕಿ ಬೆಂಗಳೂರಿನಲ್ಲಿ ಅತಿಹೆಚ್ಚು ಜನರು ಮೃತಪಟ್ಟಿದ್ದಾರೆ ಎಂಬ ಅಂಶ ವರದಿಯಲ್ಲಿ ಉಲ್ಲೇಖಗೊಂಡಿದೆ. ಸತತ ಮೂರು ವರ್ಷಗಳಿಂದ ಈ ದಾಖಲೆ ಹೀಗೆಯೇ ಇದೆ. 2018ರಲ್ಲಿ ಇಂತಹ ಮೂರು ಪ್ರಕರಣಗಳು ವರದಿಯಾಗಿದ್ದವು. 2019ರಲ್ಲಿ ಅದು 49ಕ್ಕೆ ಏರಿತು. 2022ರಲ್ಲಿ ಇಡೀ ದೇಶದಲ್ಲಿ ನಡೆದ ಇಂತಹ ಘಟನೆಗಳಲ್ಲಿ ಅರ್ಧದಷ್ಟು ಬೆಂಗಳೂರಿನಿಂದಲೇ ವರದಿಯಾಗಿವೆ. ಆತ್ಮಾವಲೋಕನ ಮಾಡಿಕೊಳ್ಳಲು ಇದಕ್ಕಿಂತ ಚಾಟಿಯೇಟು ಬೇಕಿಲ್ಲ.

ನಗರದಲ್ಲಿ ಎಷ್ಟೋ ಕಡೆ ಪಾದಚಾರಿ ಮಾರ್ಗಗಳೇ ಇಲ್ಲ. ಇರುವೆಡೆ ಒತ್ತುವರಿಗೆ ಒಳಗಾಗಿರುತ್ತವೆ. ಪಾದಚಾರಿಗಳು ವಿಧಿಯಿಲ್ಲದೆ ವಾಹನಗಳ ನಡುವೆ ರಸ್ತೆಯಲ್ಲಿಯೇ ಓಡಾಡಬೇಕಾಗುತ್ತದೆ. ರಸ್ತೆಗಳ ಸ್ಥಿತಿಯಂತೂ ಶೋಚನೀಯ. ಗುಂಡಿಗಳು ಸದಾ ಬಾಯಿ ತೆರೆದಿರುತ್ತವೆ. ಪರಿಣಾಮ– ಅಪಘಾತ, ಸಾವು–ನೋವು. ಇತ್ತೀಚೆಗೆ ಪಾದಚಾರಿ ಮಾರ್ಗದಲ್ಲಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಮೆಟ್ಟಿ ಬೆಂಗಳೂರಿನಲ್ಲಿ ಮಹಿಳೆ ಮತ್ತು ಅವರ ಮಗು ಮೃತಪಟ್ಟರು. ಬೆಂಗಳೂರು ನಗರವನ್ನು ‘ಸ್ಮಾರ್ಟ್ ಸಿಟಿ’ ಆಗಿಸಲು ಕೋಟ್ಯಂತರ ರೂಪಾಯಿ ವೆಚ್ಚ ಮಾಡಿದ್ದರೂ ಪರಿಸ್ಥಿತಿ ಹೀಗಿದೆ!

ಅಪರಾಧ ಪ್ರಕರಣಗಳು ದಾಖಲಾಗುವ ಪ್ರಮಾಣದಲ್ಲಿಯೂ ಹೆಚ್ಚಳ ಆಗಿದೆ. 2022ರಲ್ಲಿ ಬೆಂಗಳೂರಿನಲ್ಲಿ ಪ್ರತಿ ಗಂಟೆಗೆ ಕನಿಷ್ಠ 5 ಅಪರಾಧ ಪ್ರಕರಣಗಳು ದಾಖಲಾಗಿವೆ. ದಕ್ಷಿಣ ಭಾರತದ ಮೆಟ್ರೊ ನಗರಗಳಲ್ಲಿ ಅತಿಹೆಚ್ಚು ಪ್ರಕರಣಗಳು ದಾಖಲಾಗಿರುವ ನಗರಗಳಲ್ಲಿ ಬೆಂಗಳೂರಿಗೆ ಮೊದಲ ಸ್ಥಾನ. ಸೈಬರ್ ಅಪರಾಧಗಳಲ್ಲೂ ಗಣನೀಯ ಪ್ರಮಾಣದ ಏರಿಕೆ ಆಗಿದೆ. ಈ ವಿಚಾರದಲ್ಲಿಯೂ ಬೆಂಗಳೂರಿಗೆ ಪ್ರಥಮ ಸ್ಥಾನ. 2022ರಲ್ಲಿ ಒಟ್ಟು 9,940 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ದೇಶದ ಮೆಟ್ರೊ ನಗರಗಳಲ್ಲಿ ದಾಖಲಾಗಿರುವ ಒಟ್ಟು ಪ್ರಕರಣಗಳ (24,420) ಪೈಕಿ ಶೇ. 41ರಷ್ಟು ಐ.ಟಿ. ರಾಜಧಾನಿಯಲ್ಲೇ ದಾಖಲಾಗಿವೆ. ಇದು, ನಮಗೆ ಒಂದು ರೀತಿಯಲ್ಲಿ ಎಚ್ಚರಿಕೆಯ ಗಂಟೆ.

ಆನ್‌ಲೈನ್ ವ್ಯಾಪಾರ–ವಹಿವಾಟು ಹೆಚ್ಚಾಗುತ್ತಾ ಹೋದಂತೆಲ್ಲಾ ಮೋಸಗಾರರೂ ಚುರುಕಾಗುತ್ತಾರೆ. ತಾವು ಬ್ಯಾಂಕಿನಿಂದ ಅಥವಾ ಆನ್‌ಲೈನ್ ಸಂಸ್ಥೆಗಳಿಂದ ಮಾತನಾಡುತ್ತಿದ್ದೇವೆ ಎಂದು ಹೇಳಿಕೊಂಡು ಸಾರ್ವಜನಿಕರ ಬ್ಯಾಂಕ್ ಖಾತೆಗಳ ವಿವರಗಳನ್ನು, ಪಾಸ್‌ವರ್ಡ್, ಒಟಿಪಿಗಳನ್ನು ಪಡೆದು ಮೋಸ ಮಾಡುತ್ತಾರೆ. ಸೈಬರ್ ಅಪರಾಧಗಳನ್ನು ಪತ್ತೆ ಹಚ್ಚುವುದು ಈಗಾಗಲೇ ಕಠಿಣವಾಗಿರುವಾಗ ಇಂತಹ ಅಪರಾಧಗಳು ನಾಪತ್ತೆಯಾಗಿ ಉಳಿಯುವ ಸಂಭವವೇ ಹೆಚ್ಚು.

ಬೆಂಗಳೂರಿನ ‘ಬ್ರ್ಯಾಂಡ್ ಮೌಲ್ಯ’ ಹೆಚ್ಚಿಸುವುದಕ್ಕಾಗಿ ದೊಡ್ಡ ದೊಡ್ಡ ಯೋಜನೆಗಳನ್ನು ಘೋಷಿಸಿದರಷ್ಟೇ ಸಾಲದು. ಅವು ಕಾಲಮಿತಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕು. ಕಾಮಗಾರಿಗಳ ಗುಣಮಟ್ಟ ಖಾತರಿಪಡಿಸಲು ನಿಗಾ ವ್ಯವಸ್ಥೆ ಬೇಕು. ಮೂಲಸೌಕರ್ಯಗಳ ವೃದ್ಧಿಯೊಂದಿಗೆ ಅವುಗಳನ್ನು ಸುಸ್ಥಿತಿಯಲ್ಲಿ ಇರಿಸುವತ್ತ ಗಮನಹರಿಸಬೇಕು. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಬೇಕು. ದೂರದೃಷ್ಟಿಯಿಂದ ಕೂಡಿದ ಯೋಜನಾಬದ್ಧ ಕೆಲಸಗಳು ಮಾತ್ರ ನಗರದ ವರ್ಚಸ್ಸನ್ನು ಹೆಚ್ಚಿಸಬಲ್ಲವು.

■ **ಎನ್. ಉದಯಕುಮಾರ್**



ಈಶ್ವರ್